ಶ್ರೀ ಕೆ. ಸಿದ್ದಯ್ಯ.—ಕೆಲವು ಸಂದರ್ಭದಲ್ಲಿ ಬೇರೆ ಪಾರರೂ ಸಹ ಈ ದುಸ್ಥಿತಿಯಲ್ಲಿ ಇರುತ್ತಾರೆ, ಅವರಿಗೆ ಕೂಲಿ ಬಗ್ಗೆರೆ ಮಾಡುವುದಕ್ಕಾಗುವುದಿಲ್ಲ, ಉದಾರಣೆಗೆ ಹೇಳಬೇಕು ಎಂದರೆ ನಮ್ಮ ಚಾಮರಾಜ ನಗರದಲ್ಲಿ ಒಂದು ಸಾರಿ ಕೆಲಸಕ್ಕೆ ಹೋಗುತ್ತಿದ್ದಾಗ ಆತನನ್ನು ಒಂದು ಆನೆ ತುಳಿದು ಸಾಯಿಸಿತು, ಆತನ ಹೆಂಡತಿಗೆ ೩ ವರ್ಷದ ಮಗು ಒಂದು ಮತ್ತೆ ೩ ತಿಂಗಳ ಮಗು ಒಂದು ಇದೆ, ಆಕೆ ಮಕ್ಕಳನ್ನು ಬಿಟ್ಟು ಕೂಲಿ ಮಾಡಲು ಹೋಗುವುದಕ್ಕೆ ಆಗುವುದಿಲ್ಲ, ಆದುದರಿಂದ ಆಕೆಗಾದರೂ ಕೂಡ ಏನಾದರೂ ಒಂದು ವ್ಯವಸ್ಥೆ ಮಾಡಬೇಕು. Similar benefits will help them very much.

SRI D DEVARAJ URS.—We could employ the wife *i.e.*, the widow. ಆಕೆ ಕೆಲಸ ಮಾಡಬೇಕಾದರೆ ಹೇಳಿ, ಎಲ್ಲಿಯಾದರೂ ಕೊಡಿಸೋಣ. ಆಕೆಗೆ ಸಾಸಾಸನ ಬರುವುದಾದರೆ ಕೊಡಿಸೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಈಗ ಏನು ಹೇಳಿದರೂ ಪಂಜೂರು.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಬುದ್ಧಿಯವರಿಗೆ ಮೊದಲೇ ಈ ದೊಡ್ಡ ಬುದ್ಧಿ ಇದ್ದಿದ್ದರೆ ಬಹಳ ಚೆನ್ನಾಗಿ ಇತ್ತು.

SRI D. DEVARAJ URS.—I don't like this type of insinuation from the hon. Member. He goes on using language which is not dignified

SRI B. PUTTASWAMIAH.—What exactly you mean by that.....

SRI K. H. RANGANATH.—Let him address the Speaker.

MADAM SPEAKER.—That is exactly what I am telling.

SRI K. H. RANGANATH.—Are we here to hear all these things ? Are we here to tolerate all these things ?

SRI D DEVARAJ URS.—He goes on using language which is not dignified to this House.

Cars of Hampi Virupaksheswaraswamy

452. SRI B. SATHYANARAYANA SINGH (Hospet).—Will the Minister for Revenue be pleased to state :—

(*a*) whether it is a fact that lowest tender for building of Cars of Hampi Virupaksheswaraswamy temple were not accepted by the concerned Authorities ;

(*b*) if so, the reason for the same and the loss sufferred by Government as a result of non-acceptance of the lowest tender ?

SRI N HUTCHMASTHYGOWDA (Minister for Revenue).—

(*a*) Yes.

(*b*) The quality of the lowest tenderer is very poor and he has no experience in making Rathas which is a highly skilled work. Hence the work has been entrusted to a second lowest tenderer as he is an expert in making Rathas. The difference between the accepted rate (Rs 70,000) and the lowest tender (Rs. 45,000) is Rs. 65,000.

However there is no loss to Government in not accepting his tender as the expenditure on the construction of Katha will be met from the Temple funds

ಶ್ರೀ ಬಿ. ಸತ್ಯನಾರಾಯಣಸಿಂಗ್.—ಸ್ವಾಮಿ, (ಬಿ) ಪ್ರಶ್ನೆಗೆ ಉತ್ತರವಾಗಿ, ೪೫,೦೦೦ ರೂಪಾಯಿ ಮತ್ತು ೭೦,೦೦೦ ರೂಪಾಯಿಗಳ ಟೆಂಡರ್ ಬಂದಿದ್ದು ೭೦,೨೦೦ ರೂಪಾಯಿಗಳ ಟೆಂಡರುದಾರರಿಗೆ ಈ ಕೆಲಸವನ್ನು ಒಪ್ಪಿಸಿದೆ ಎಂದು ಹೇಳಿದ್ದೀರಿ. ಈ ತೀರ್ಮಾನವನ್ನು ತೆಗೆದುಕೊಂಡಂತಹ ಎಕ್ಸ್‌ಪರ್ಟ್ ಕಮಿಟಿಯವರಿಗೆ ಕುಶಲ ಕೈಗಾರಿಕೆಯಲ್ಲಿ ಏನಾದರೂ ತಜ್ಞತೆ ಇದೆಯೇ ಎನ್ನುವುದನ್ನು ತಿಳಿಸುತ್ತೀರಾ ?

† ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇದರ ಬಗ್ಗೆ ಮೂರು ಟೆಂಡರುಗಳು ಬಂದಿದ್ದುದಲ್ಲಿ ಶ್ರೀ ಸಿ. ವಿ. ರಾಮಣ್ಣ ಎನ್ನುವವರು ೪೫,೯೦೦ ರೂಪಾಯಿಗಳಿಗೆ ಟೆಂಡರ್ ಹಾಕಿದ್ದು ಶ್ರೀ ಪರಮೇಶ್ವರಾಚಾರಿ ಎನ್ನುವವರು ೮೫,೩೮೦ ರೂಪಾಯಿಗಳಿಗೆ ಟೆಂಟರ್ ಹಾಕಿದರು ಇದರ ಬಗ್ಗೆ ಯಾರು ಯಾರಿಂದ ಯಾವ ಕೆಲಸವನ್ನು ಹೇಗೆ ಮಾಡುತ್ತಾರೆ. ಯಾರಿಗೆ ರಥ ತಯಾರು ಮಾಡತಕ್ಕಂತಹ ಅನುಭವ ಇದೆ ಎನ್ನುವ ಬಗ್ಗೆ ಅಲ್ಲಿಯ ಜಿಲ್ಲಾಧಿಕಾರಿಗಳು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಅವರುಗಳ ವರ್ಕ್ ಷಾಪುಗಳಿಗೆ ಹೋಗಿ ನೋಡಿ, ಎಲ್ಲಿ ಯಾವ ತರಹದ ಕೆಲಸ ನಡೆಯುತ್ತದೆ ಎನ್ನುವುದನ್ನು ತಿಳಿದು, ಶ್ರೀ ಸಿ. ವಿ. ರಾಮಣ್ಣ ಎನ್ನುವವರು ಗಾಡಿ ಕಾರ್ಖಾನೆ ಇಟ್ಟುಕೊಂಡಿದ್ದರೂ, ಶ್ರೀ ಪರಮೇಶ್ವರಾಚಾರ್ ಎನ್ನುವವರಿಗೆ ರಥಗಳನ್ನು ಮಾಡುವ ಅನುಭವ ಇದೆ ಎನ್ನುವುದು ಗೊತ್ತಾದ ಮೇಲೆ ಅವರಿಗೆ ಕೊಟ್ಟಿದೆ. ಇವರು ಮೈಸೂರಿನ ವೇಣುಗೋಪಾಲ ಸ್ವಾಮಿ ದೇವಸ್ಥಾನದ ರಥವನ್ನು ತಯಾರು ಮಾಡಿದ್ದಾರೆ, ಬಳ್ಳಾರಿ ಜಿಲ್ಲೆಯ ಉಜ್ಜಯಿನಿಯಲ್ಲಿ ರಥ ತಯಾರುಮಾಡಿದ್ದಾರೆ, ಅಲ್ಲಿ ಹೋಗಿ ನೋಡಿ ಅವರ ಅನುಭವ ತಿಳಿದ ಮೇಲೆ ಅವರು ೮೫,೩೦೦ ರೂಪಾಯಿಗಳಿಗೆ ಹಾಕಿದ ಟೆಂಡರನ್ನು ಆಷಢಿತ ಕಮಿಟಿಯವರು ಆತನನ್ನು ಕರೆದು ೭೦,೦೦೦ ರೂಪಾಯಿಗಳಿಗೆ ಒಪ್ಪಿಸಿ ಕೆಲಸ ಮಾಡುವುದಕ್ಕೆ ಹೇಳಿದ್ದಾರೆ.

ಶ್ರೀ ಟಿ. ಎಂ. ಮಂಜುನಾಥ್.—ಸ್ವಾಮಿ, ಟೆಂಡರ್ ಕರೆಯಬೇಕಾದರೆ, ರಥ ಮಾಡತಕ್ಕವನಿಗೆ ಯಾವ ಅರ್ಹತೆ ಇರಬೇಕು ಎಂದು ಇವರು ಟೆಂಡರ್ ಕರೆಯುವಾಗಲೇ ಹಾಕಿದ್ದರೆ ಈ ತರಹ ಅವ್ಯವಹಾರ ಆಗುತ್ತಾ ಇರಲಿಲ್ಲ ಎಂದು ಕಾಣುತ್ತದೆ. ಕಮಿಟಿಯವರು ಕಡಿಮೆ ಟೆಂಡರ್ ಹಾಕಿರತಕ್ಕವರನ್ನು ಕರೆಸಿ ಕೆಲಸ ಮಾಡಿಸಿ ಅವರಿಗೆ ಅರ್ಹತೆ ಇಲ್ಲ ಎಂದು ಏನಾದರೂ ಪರಿಶೀಲನೆ ಮಾಡಿದ್ದೀರಾ ?

ಅಧ್ಯಕ್ಷರು.—ರಥ ಮಾಡಿಸಿ ಪರಿಶೀಲನೆ ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಟಿ. ಎಂ. ಮಂಜುನಾಥ.—ಟೆಂಡರ್ ಕರೆಯಬೇಕಾದರೆ, ಇಂತಹ ಉತ್ಸವ ದರ್ಜೆಯವರೇ ಹಾಕಬೇಕು ಎಂದು ತಿಳಿಸಿದ್ದರೆ, ಈ ತರಹ ಆಗುತ್ತಾ ಇರಲಿಲ್ಲ, ಈಗ ನಡೆದಿರತಕ್ಕದ್ದನ್ನು ನೋಡಿದರೆ ಕಮಿಟಿಯವರು ಮತ್ತು ರಥ ಮಾಡುವವರು ಶಾಮೀಲಾಗಿದ್ದಾರೆ ಎನ್ನುವುದು ಅರ್ಥವಾಗುತ್ತದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರು ಅವ್ಯವಹಾರ, ಷಾಮೀಲು ಎನ್ನುವ ಪದಗಳನ್ನು ಬಿಟ್ಟು ಗಂಭೀರವಾಗಿ ಹೇಳಿದರೆ ಒಳ್ಳೆಯದು. ಇಲ್ಲಿ ರಥ ಮಾಡಿಸುವುದಕ್ಕಾಗಿ ಟೆಂಡರ್ ಕರೆದಾಗ ಕೆಲವರು ಅನುಭವವುಳ್ಳವರೂ ಟೆಂಡರ್ ಹಾಕಿದ್ದಾರೆ, ಅನುಭವ ಇಲ್ಲದವರೂ ಟೆಂಡರ್ ಹಾಕಿದ್ದಾರೆ, ಅದರಲ್ಲಿ ಗಾಡಿ ಕೆಲಸ ಮಾಡುವವನೂ ಹಾಕಿದ್ದಾನೆ. ಇದರಲ್ಲಿ ಏನಾಗುತ್ತದೆ ಅಂದರೆ ಕನಿಷ್ಟ ಟೆಂಡರುದಾರನಿಗೆ ಲಕ್ಷಾಂತರ ರೂಪಾಯಿಗಳ ಬೆಲೆಯುಳ್ಳ ತೇಗದ ಮರವನ್ನು ಆತನ ಕೈಗೆ ಕೊಟ್ಟು ರಥ ಮಾಡಿಸಿದಾಗ ಅದು ಏನಾದರೂ ಚೆನ್ನಾಗಿ ಬರದೆ ಕೆಟ್ಟುಹೋದರೆ ಆಗ ಮನಸ್ಸಿಗೆ ನೋವಾಗುವುದಲ್ಲದೆ, ಹಣ ಕೂಡ ವೇಸ್ಟ್ ಆಗುತ್ತದೆ ಇವರು ಟೆಂಡರ್ ಹಾಕಿದ ಮೇಲೆ ಎಂಡೋಮೆಂಟ್ ಕಮಿಷನರ್‌ರವರು ಆ ಸ್ಥಳಕ್ಕೆ ಹೋಗಿ ಅವರು ಹೇಗೆ ಕೆಲಸ ಮಾಡುತ್ತಾರೆ ಎಂಬುದನ್ನು ಪರಿಶೀಲನೆ ಮಾಡಿಕೊಂಡು ಬಂದಿದ್ದಾರೆ. ಇಷ್ಟೇ ಅಲ್ಲದೆ ಸಮಿತಿಯ ಸದಸ್ಯರೂ ಕೂಡ ಇದನ್ನು ನೋಡಿಕೊಂಡು ಬಂದಿದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ರಥ ಮುಂತಾದ ನೈಪುಣ್ಯತೆಯ ಕೆಲಸಗಳನ್ನು ಮಾಡಿಸುವಾಗ ಯಾರು ಆ ಕೆಲಸದಲ್ಲಿ ನಿಪುಣರು ಇದ್ದಾರೆ ಅಂಥವರನ್ನು ಕರೆಸಿ ವಿಚಾರ ಮಾಡಿ ಆ ಕೆಲಸ ಒಪ್ಪಿಸಬೇಕು. ಉದಾಹರಣೆಗೆ ಗೂಮ್ಮಟೇಶ್ವರನನ್ನು ಮಾಡುವ ನಿಪುಣರು ಕಾರ್ಕಳದಲ್ಲಿದ್ದಾರೆ ಅದೇ ರೀತಿ ಈ ರಥಗಳನ್ನು ಎಲ್ಲಿ ಚೆನ್ನಾಗಿ ಮಾಡುತ್ತಾರೆ ಎಂಬುದನ್ನು ನೋಡಿ ಅಂಥವರಿಗೆ ಒಪ್ಪಿಸುವುದು ಉಚಿತವಲ್ಲವೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಪಂರಗೆಲಸ ಮಾಡುವವರಂ, ಗೊಂಬೆಗಳನ್ನು ತಯಾರು ಮಾಡುವವರ ಒಂದಂ ಸೆಕ್ಷನ್ ಇದೆ. ಅವರೂ ಕೂಡ ಚೆನ್ನಾಗಿ ಯಾರಂ ಈ ಕೆಲಸವನ್ನು ಮಾಡುತ್ತಾರೆ ಎಂಬುದನ್ನು ನೋಡಿದ್ದಾರೆ. ನಾವು ಅವರ ಅಭಿಪ್ರಾಯವನ್ನೂ ತೆಗೆದುಕೊಂಡು ಮಾಡಿದ್ದೇವೆ. ಯಾರೇ ಆಗಲಿ ಒಬ್ಬರನ್ನು ನಿಪುಣರಂ ಎಂದಂ ಹೇಳಬೇಕಾದರೆ, ಅವರಿಗೆ ಆ ವಿಷಯದಲ್ಲಿ ಚೆನ್ನಾಗಿ ಮಾಹಿತಿ ಗೊತ್ತಿದ್ದರೆ ಮಾತ್ರ ಹೇಳುವುದಕ್ಕೆ ಸಾಧ್ಯ.

ಶ್ರೀ ಬಿ. ಸತ್ಯನಾರಾಯಣಸಿಂಗ್ —ಸ್ವಾಮಿ, ಇಲ್ಲಿ ಕಮಿಟಿಯಂ ಸದಸ್ಯರಂ ಯಾರೂ ಇಲ್ಲ. ಇದ್ದಿದ್ದರೆ ಹೇಳುತ್ತಿದೆ. ೪೫ ಸಾವಿರ ರೂಪಾಯಿ ಟೆಂಡರ್ ಇದ್ದಿದನ್ನು ೭೦ ಸಾವಿರ ರೂಪಾಯಿಗೆ ವಿತರ್ಕ್ಯಾಗಿ ಇಳಿಸಿದ್ದಾರೆ ? ನನ್ನ ಮಟ್ಟಿಗೆ ಹೇಳುವುದಾದರೆ ಇದರಲ್ಲಿ ಏನೋ ದುರ್ವ್ಯವಹಾರ ನಡೆದಿದೆ. ಈಗ ೪೫ ಸಾವಿರ ರೂಪಾಯಿಗಳಿಗೆ ಟೆಂಡರ್ ಕೊಟ್ಟಿರುವವರೂ ಕೂಡ ಪ್ರತಿವೆಗಳನ್ನು ಮಾಡುವವರಂ ಅವರಂ ಸ್ಥಳೀಯಂ ಜನ, ಅವರಂ ದೂರ ಯಾವ ಊರಿಗೂ ಹೋಗಬೇಕಾದ್ದಿಲ್ಲ. ಆದಂದರಿಂದ ಅವರು ೪೫ ಸಾವಿರ ರೂಪಾಯಿಗಳಿಗೆ ಟೆಂಡರ್ ಹಾಕಿದ್ದಾರೆ. ಆದರೆ ಅವರಂ ಚೆನ್ನಾಗಿ ಕೆಲಸಮಾಡುವುದಿಲ್ಲ ಎಂದಂ ಹೇಳುವುದಂ ಸತ್ಯಕ್ಕೆ ದೂರವಾದುದು. ಪ್ರತಿಯೊಂದನ್ನೂ ಎಂಡೋಮೆಂಟ್ ಕಮಿಷನರ್‌ರವರೇ ಪರಿಶೀಲನೆ ಮಾಡುವುದು ಅಷ್ಟು ಸರಿಯಲ್ಲ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ವಿಶೇಷ ಜಿಲ್ಲಾಧಿಕಾರಿಗಳೇ ಇದನ್ನು ಸ್ವತ ಜವಾಬ್ದಾರಿಯಿಂದ ಮಾಡಿಲ್ಲ. ಇದರಲ್ಲಿ ಸಮಿತಿಯ ಸದಸ್ಯರೂ ಕೂಡ ಇದ್ದಾರೆ ೪೫ ಸಾವಿರ ರೂಪಾಯಿಗೆ ಟೆಂಡರ್ ಕೊಟ್ಟಿದ್ದಾಗ ನಾನು ದೇವಸ್ಥಾನದ ಫಂಡ್‌ನಲ್ಲಿ ಅಷ್ಟು ದುಡ್ಡಿಲ್ಲ, ಇದನ್ನು ಕಡಿಮೆ ಮಾಡಿಕೊಳ್ಳಬೇಕೆಂದು ಹೇಳಿದಾಗ ಎಂಡೋಮೆಂಟ್ ಕಮಿಷನರ್‌ರವರಂ ಟೆಂಡರುದಾರರನ್ನು ಕರೆತಂ ಹೌದು ಇದನ್ನು ಕಡಿಮೆ ಮಾಡಿಕೊಳ್ಳಬೇಕಂ, ಆದರಲ್ಲಿ ಅಷ್ಟು ದುಡ್ಡಿಲ್ಲ, ನೀವು ಹಣವನ್ನು ಕಡಿಮೆ ಮಾಡಿಕೊಂಡರೆ ಅವರಿಗೆ ನೀವು ಸಹಾಯಂ ಮಾಡಿದಂತಾಗುತ್ತದೆಂದು ಹೇಳಿದಮೇಲೆ ಅವರಂ ನಮಗೆ ಶಿಯಾಯಿತಿ ತೋರಿಸಿದ್ದಾರೆ. ಇದರಲ್ಲಿ ನಮಗೆ ಏನಾದರೂ ಅನುಮಾನ ಇದ್ದರೆ ಎಂಡೋಮೆಂಡ್ ಕಮಿಷನರ್‌ರವರನ್ನು ಅಲ್ಲಿಗೆ ಕಳಂಹಿಸಿ ಇದರ ಬಗ್ಗೆ ಪೂರ್ಣ ವಿವರಗಳನ್ನು ತರಿಸಿಕೊಂಡು ಸಭೆಗೆ ತಿಳಿಸಂತ್ತೇನೆ.

ಶ್ರೀ ಬಿ. ಸತ್ಯನಾರಾಯಣಸಿಂಗ್ —ಈ ೪೫ ಸಾವಿರ ರೂಪಾಯಿಗಳಿಗೆ ಟೆಂಡರ್ ಕೊಟ್ಟಿರುವವರಂ ಸ್ಥಳೀಯಂ ಜನರಂ, ಆದುದರಿಂದ ಅವರಂ ಒಪ್ಪಿಕೊಂಡಿದ್ದಾರೆ ಎಂಬುದು ನಮಗೆ ಗೊತ್ತಿದೆ:

ಶ್ರೀ ಎನ್. ಹುಚ್ಚಮಾಸ್ತಿಗೌಡ.—ನಮಗೆ ವರದಿ ಮಾಡಿರುವವರಂ ಬೇಜವಾಬ್ದಾರಿಯಿಂದ ಮಾಡಿಲ್ಲ ವೆಂದಂ ನನ್ನ ಮನಸ್ಸಿಗೆ ಅನಿಸಂತ್ತದೆ.

ಶ್ರೀ ಕಾಗೋಡು ತಿಮಂ ಪ್ಪ.—ಈ ಬಗ್ಗೆ ಕಮಿಟಿಯಂ ಅಭಿಪ್ರಾಯವನ್ನು ಪಡೆದಿದೆ ಎಂದು ತಾವು ಹೇಳುತ್ತೀರಿ, ಅವರು ಪಡೆದಿಲ್ಲ ಎಂದಂ ಹೇಳುತ್ತಾರೆ. ಇದರಲ್ಲಿ ಯಾವುದಂ ಸರಿ ? ಇಲ್ಲಿ ಗಾಡಿ ಕೆಲಸ ಮಾಡುವವನೂ ಕೂಡ ತನ್ನ ಕೂಲಕಸಬನ್ನು ಮಾಡುತ್ತಿದ್ದಾನೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ —ನಿವಂಗೆ ಅನುಮಾನ ಬರದೇ ಇರುವ ಕಡೆಯಲ್ಲೂ ಅನುಮಾನ ಬಂದರೆ ಅದಕ್ಕೆ ನಾವೇನಂ ಮಾಡುವುದಕ್ಕಾಗುತ್ತದೆ ? ತಮಗೆ ಏನಾದರೂ ಅನುಮಾನ ಇದ್ದರೆ ತಿಳಿಸಿ ನಂತರ ಎಂಡೋಮೆಂಟ್ ಕಮಿಷನರ್‌ರವರನ್ನು ಕರೆಸಿ ಪೂರ್ಣ ವಿವರಗಳನ್ನು ತಿಳಿದಂ ಸಭೆಗೆ ತಿಳಿಸಂತ್ತೇನೆ.

Amount given under DIR Scheme in Tiptur.

480. SRI T. M. MANJUNATH (Tiptur).—Will the Chief Minister be pleased to state :

(*a*) the amount given under DIR Scheme through Nationalised Banks to (Tiptur) and D.C.C. Banks of Tiptur ;

(*b*) The No. of applications received for providing funds under DIR Schemes ?